


ಬಸ್ ನಿಲ್ದಾಣದಲ್ಲಿ ತಾಯಿ ಮತ್ತು ಆರು ವರ್ಷದ ಮಗಳು ಬಿಎಂಟಿಸಿ ಬಸ್‌ಗಾಗಿ ಕಾಯುತ್ತಿದ್ದರು. 85k ಬಸ್ ಬಂತು.
**ಮಗಳು:** ಬಸ್ ಮೇಲೆ 85k ಅಂತ ಯಾಕೆ ಬರೆದವ್ರೆ?
**ತಾಯಿ:** ಅದಾ... ಬಸ್‌ನ ತೂಕ ಅಷ್ಟಿದೆ ಅಂತ ಅರ್ಥ.

**ಪುಟ್ಟಂಜ:** ಮಗಳ ಮದುವೆಗೆ ಎಷ್ಟು ಖರ್ಚಾಯ್ತು?
**ಸಿದ್ಲಿಂಗ:** ಹದಿನೈದು ಸಾವಿರ.
**ಪುಟ್ಟಂಜ:** ಅದ್ಯಾಗೊ?
**ಸಿದ್ಲಿಂಗ:** ಮಗಳಿಗೆ ಹದಿನೈದು ಸಾವಿರ ರೂಪಾಯಿಯ ಮೊಬೈಲ್ ಕೊಡಿಸ್ದೆ, ಅದರ ಮೂಲಕವೆ ಗಂಡನ್ನ ಹುಡುಕಿಕೊಂಡು ಓಡಿ ಹೋಗಿ ಲವ್ ಮ್ಯಾರೇಜ್ ಆದಳು.

**ಪುಟ್ಟಂಜ:** ನಾನು ದೊಡ್ಡ ರಾಜಕಾರಣಿ ಆಗ್ಬೇಕು. ಅದಕ್ಕಾಗಿ ಪೂಜೆ, ಹೋಮ, ಹವನ, ಅಭಿಷೇಕ ಇದ್ರೆ ಹೇಳಿ ಸ್ವಾಮೀಜಿ, ಎಷ್ಟೇ ಖರ್ಚಾದ್ರೂ ಪರ್ವಾಗಿಲ್ಲ ಮಾಡಿಸ್ತೀನಿ.
**ಸ್ವಾಮೀಜಿ:** ಅಂತಹ ವಿದ್ಯೆ ನನಗೆ ಗೊತ್ತಿದ್ರೆ ನಾನ್ಯಾಕೆ ಸ್ವಾಮೀಜಿ ಆಗ್ತಾ ಇದ್ದೆ.

**ಪುಟ್ಟಂಜ:** ಅತ್ತೆ–ಸೊಸೆಯರು ತಾನು ಮೇಲು, ತಾನು ಮೇಲು ಅಂತ ಕಿತ್ತಾಡ್ತಿರ್ತಾರೆ ಯಾಕೆ?
**ನಂಜ:** ಅವರಿಬ್ಬರಲ್ಲಿ ಯಾರೂ ಮೇಲಲ್ಲ?
**ಪುಟ್ಟಂಜ:** ಯಾಕೆ?
**ನಂಜ:** ಯಾಕಂದ್ರೆ ಅವರಿಬ್ಬರೂ ಫೀಮೇಲು.

**ಪುಟ್ಟಂಜ:** ಮನೇಲಿ ಮಗನಾಗಿ ಉಳಿಲಾ, ಅತ್ತೆ ಮನೆಗೆ ಅಳಿಯನಾಗಿ ಹೋಗ್ಲಾ?
**ನಂಜ:** ಎಲ್ಲಿದ್ರೂ ಗಂಡನ ಪಾತ್ರವೆ.

**ಸಚಿವ:** ಹಗರಣದಲ್ಲಿ ನನ್ನ ಪಾತ್ರವಿಲ್ಲ.
**ಪತ್ರಕರ್ತ:** ಹಾಗಾದ್ರೆ ನಿರ್ದೇಶನ ಇದೆಯಾ ಸಾರ್?

**ಪುಟ್ಟಂಜ:** ನಿಮ್ಮನೇಲಿ ಅಡುಗೆ ನಿಮ್ಮ ಅತ್ತೆ ಚೆನ್ನಾಗಿ ಮಾಡ್ತಾರೋ, ನಿಮ್ಮ ಹೆಂಡತಿ ಚೆನ್ನಾಗಿ ಮಾಡ್ತಾರೋ?
**ನಂಜ:** ಅವರಿಬ್ಬರೂ ಅಡುಗೇನೆ ಮಾಡಲ್ಲ.
**ಪುಟ್ಟಂಜ:** ಅಂದ್ರೆ?
**ನಂಜ:** ನಾನೆ ಯಾವಾಗ್ಲೂ ಅಡುಗೆ ಮಾಡೋದು.

**ಮೇಷ್ಟು:** ಭಾರತವನ್ನು ಪರ್ಯಾಯ ದ್ವೀಪ ಅಂತ ಯಾಕೆ ಕರೆಯುತ್ತಾರೆ?
**ಮುರುಳಿ:** ಅರ್ಧ ಉತ್ತರ ಪ್ರಶ್ನೆಯಲ್ಲೆ ಅಡಗಿರುತ್ತೆ ಅಂತ ಸಮಾಜ ವಿಜ್ಞಾನದ ಮೇಷ್ಟು ಆಗಾಗ ಹೇಳುತ್ತಿದ್ದರು. ಅವರು ಹೇಳಿದಂತೆ ಅರ್ಧ ಉತ್ತರ ಪ್ರಶ್ನೆಯಲ್ಲೆ ಅಡಗಿರುತ್ತೆ. ಈ ಪ್ರಶ್ನೆಗೆ ಇರುವ ಎರಡು ಅಂಕಗಳು, ಅರ್ಧ ಅಂದರೆ ಒಂದು, ನೀಡಿದರೆ ಸಾಕೆನಗೆ.

**ಹೆಂಡತಿ:** ನಂಗೆ ಅದು ಗೊತ್ತು, ಅವರು ಗೊತ್ತು, ಅಂತಾವ್ರು ಗೊತ್ತು ಅಂತೆಲ್ಲಾ ಅಂತೀರಾ. ಆದ್ರೆ ದುಡ್ಡು ಹೇಗೆ ಮಾಡ್ತಾರೆ ಅಂತ ಗೊತ್ತಾ?
**ಗಂಡ:** ಅದೂ ಗೊತ್ತು. ಪೇಪರ್‌ನಲ್ಲಿ ಮಾಡುತ್ತಾರೆ.




ನಂಜುಂಡಯ್ಯನವರು ವೇದಿಕೆಯ ಮೇಲೆ ಭಾವಪರವಶರಾಗಿ ಭಾಷಣ ಮಾಡುತ್ತಾ ಹೀಗಂದರು...
**ನಂಜುಂಡಯ್ಯ:** ನಾನು ದೇಶಕ್ಕಾಗಿ ಒಂದು ಹೊತ್ತಿನ ಊಟ ಬಿಟ್ಟಿದ್ದೇನೆ.
ಕೂಡಲೇ ಎದ್ದು ನಿಂತ ಓರ್ವ
**ಸಭಿಕ:** ದಿನಕ್ಕೆ ಎಷ್ಟು ಬಾರಿ ಊಟ ಮಾಡ್ತೀರಾ?
ನಂಜುಂಡಯ್ಯ: ಮೂರು ಬಾರಿ.
**ಸಭಿಕ:** ಎಲ್ರೂ ಮೂರೇ ಟೈಮ್ ಊಟ ಮಾಡೋದು.
**ನಂಜುಂಡಯ್ಯ:** ನಾನು ಮೊದಲು ನಾಲ್ಕು ಬಾರಿ ಮಾಡ್ತಾ ಇದ್ದೆ.

**ನಂಜುಂಡಯ್ಯ:** 'ಸದಾ' ವಾರಪತ್ರಿಕೆಯಲ್ಲಿ ಜನಪ್ರಿಯ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು.
**ಸಭಿಕ:** ಜನಪ್ರಿಯ ಅಂತ ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ?
**ನಂಜುಂಡಯ್ಯ:** ಆ ಕಥೆ ಹೆಸರೆ 'ಜನಪ್ರಿಯ'.

**ನಂಜುಂಡಯ್ಯ:** ಈ ದೇಶಕ್ಕೆ ಸ್ವಾತಂತ್ರ್ಯ ಹಲವಾರು ದೇಶಭಕ್ತರ ತ್ಯಾಗ ಬಲಿದಾನಗಳ ಫಲವಾಗಿ ಬಂದಿದೆ. ಬಹುತೇಕರಿಗೆ ಇಂದಿನವರೆಗೂ ಅದರ ಅರಿವೇ ಇಲ್ಲ.
**ಸಭಿಕ:** ಹೇಗೆ ಬಂತು ಅನ್ನೋದು ಮುಖ್ಯವಲ್ಲ. ಏನು ಬಂದಿದೆ ಎಂಬುದು ಮುಖ್ಯ.

**ಟೀಚರ್:** ಪಂಡಿತ ರಾಧಾಕೃಷ್ಣ ಅವರ ಜನ್ಮದಿನವನ್ನು ಯಾವ ದಿನವನ್ನಾಗಿ ಆಚರಿಸಲಾಗುತ್ತದೆ?
**ವಿದ್ಯಾರ್ಥಿ:** ಪಂಡಿತ ರಾಧಾಕೃಷ್ಣ ಅವರ ಜನ್ಮ ದಿನವನ್ನು ರಜಾ ದಿನವನ್ನಾಗಿ ಆಚರಿಸಲಾಗುತ್ತದೆ.

**ಮಗ:** ಅಪ್ಪ, ಐನೂರು ಬೇಕಿತ್ತು.
**ಅಪ್ಪ:** ನಿನ್ನೆ ಐನೂರು ಕೊಟ್ಟನಲ್ಲ.
**ಮಗ:** ನಾಳೆ ಮಾಡುವುದನ್ನು ಇಂದೇ ಮಾಡು ಅಂತ ಹೆಳಿದ್ರಿ, ಹಾಗಾಗಿ ಇಂದು ಮಾಡುವ ಖರ್ಚನ್ನು ನಿನ್ನೆಯೇ ಮಾಡಿದೆ.

**ಚಿತ್ರಗುಪ್ತ:** ಭೂಲೋಕದಲ್ಲಿ ನೀನು ಏನಾದರೂ ನೋಡಬಾರದ್ದನ್ನು ನೋಡಿದೆಯಾ?
**ಮಾನವ:** ಮೊಬೈಲ್ ಬಂದ ಮೇಲೆ ನೋಡಬಾರದ್ದು ಅಂಥಾದ್ದೇನು ಉಳಿದಿಲ್ಲ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ